ಮೊಮ್ಮಕ್ಕಳನ್ನು ಜೊತೆಗೆ ಮಲಗಿಸಿಕೊಂಡು ಮಲಗುತ್ತಿದ್ದ ಅಜ್ಜಿ ತನ್ನ ಸೀರೆಯ ಬಾಳೆಗಂಟಿನಲ್ಲಿ ಕಟ್ಟಿಕೊಂಡಿರುತ್ತಿದ್ದ ಕಷ್ಟಗಳನ್ನೆಲ್ಲ ಆಗೀಗ ಬಿಚ್ಚಿಡುತ್ತಿದ್ದಳು. ತಾತನ ಹುಬ್ಬುಗಂಟು, ಮಾಡಿದ ಅಡುಗೆಗೆ ತುಸು ಉಪ್ಪು ಹೆಚ್ಚೆಂಬ ಕಾರಣಕ್ಕೆ ಮೂಡುತ್ತಿದ್ದ ಸುಕ್ಕುಗಳೆಲ್ಲ ಅವಳಿಗೆ ಕಷ್ಟಗಳ ಮಳೆಯೇ. ಆ ಮಳೆಯಲ್ಲಿ ದಶಕಗಟ್ಟಲೆ ತೋಯ್ದು, ಮೇಲಿಂದ ಮೇಲೆ ಆಗುತ್ತಿದ್ದ ಹೆರಿಗೆ ನೋವುಗಳ ಮುಂದೆ ದೈನಿಕದ ದಂದುಗಳೆಲ್ಲ ತೀರಾ ಹಗುರ ಎಂಬಂತೆ ಬದುಕಿದ ಜೀವ. ಯಾರದೋ ಜೊತೆಗೆ ಗಡುವು ಮೀರಿದ ಅವಧಿ ಅವಳು ಹರಟುತ್ತಾ ನಿಂತರೂ ತಾತನಿಗೆ ಕುದಿ. ಒಮ್ಮೊಮ್ಮೆ ಅವನ ಕುದಿಯಂತೆಯೇ ಇವಳೂ ಕುದ್ದು, ದಿಢೀರನೆ ಒಂದು 'ಸಂಸ್ಕೃತ' ಪದವನ್ನು ಉದುರಿಸಿ ತನ್ನ ಹತಾಶೆಯನ್ನೆಲ್ಲ ಒಗೆದದ್ದೂ ಇದೆ.

ಅಜ್ಜಿಯ ಇಂತಹ ಜಂಜಡಗಳ ಕೇಳಿ ಬೆಳೆಯುವ ಮಕ್ಕಳಿಗೆ ತಾಯಿಯ, ತಂದೆಯ, ಅಣ್ಣ–ಅಕ್ಕ–ತಮ್ಮನ ಬಗೆಬಗೆಯದೇ ಆದ ಬಿಕ್ಕಳಿಕೆಗಳು ದಕ್ಕಿಯೇ ಒಂದು ವ್ಯಕ್ತಿತ್ವ ರೂಪುಗೊಳ್ಳುತ್ತಿದ್ದುದು. 'ಇಂಡಿಯನ್ ಸೊಸೈಟಿ' ಎಂಬ ಕೃತಿಯಲ್ಲಿ ಎಂ.ಎನ್. ಶ್ರೀನಿವಾಸ್ ಇಂತಹ ಭವ–ಬಂಧಗಳಿಗೆಲ್ಲ ಒಂದು ಅಕಡೆಮಿಕ್ ಚೌಕಟ್ಟು ಕೊಟ್ಟಿದ್ದಾರೆ. ಕೌಟುಂಬಿಕ ವ್ಯವಸ್ಥೆಯ ಕುರಿತಷ್ಟೇ ಅಲ್ಲದೆ, ಭಾರತೀಯ ಸಾಮಾಜಿಕ ಶಿಲ್ಪದಲ್ಲಿನ ಸಂಸ್ಕೃತೀಕರಣ, ಜಾತಿ ವ್ಯವಸ್ಥೆ, ನಾಗರಿಕ ಸಮಾಜದ ಹಲವು ವ್ಯವಸ್ಥೆಗಳನ್ನು ಶಿಷ್ಟ ಪರಿಭಾಷೆಯಲ್ಲಿ ಅವರು ಕಟ್ಟಿಕೊಟ್ಟಿದ್ದಾರೆ. ಈಗ ಇಂತಹ ಸಾಂಪ್ರದಾಯಿಕ ಮನಃಸ್ಥಿತಿಯನ್ನು ಮೀರುವಂತಹ ಒಂದು ಸೊಲ್ಲು ಕೆಲವೆಡೆ ಜೋರಾಗಿದೆ.

ಫಿಲಡೆಲ್ಫಿಯಾದ ಸೋಫಿ ಲೂಯಿಸ್, 'ಬ್ರೂಕ್ಲಿನ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ರಿಸರ್ಚ್'ನಲ್ಲಿ ಪಾಠ ಮಾಡುತ್ತಾರೆ. ಅವರೂ ಅಂಥದೊಂದು ಸೊಲ್ಲು ಹೊರಡಿಸಿದ್ದಾರೆ. ಈ ಸೋಫಿ ಸಾಮಾಜಿಕ ಸ್ಥಿತ್ಯಂತರಗಳ ಕುರಿತು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ವರದಿಗಳನ್ನು ಪ್ರಕಟಿಸುವ ಫ್ರೀಲಾನ್ಸರ್ ಕೂಡ ಹೌದು. 'ಸರೊಗೆಸಿ ನೌ: ಫೆಮಿನಿಸಮ್ ಅಗೇನ್‌ಸ್ಟ್ ಫ್ಯಾಮಿಲಿ' ಅವರ ಮೊದಲ ಪ್ರಕಟಿತ ಕೃತಿ. 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಅವರ ಕೆಲವು ಸಾಮಾಜಿಕ ವಿಷಯಾಧಾರಿತ ಪ್ರಬಂಧಗಳೂ ಪ್ರಕಟಗೊಂಡಿವೆ. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ 'ಫೆಮಿನಿಸ್ಟ್, ಕ್ವೀರ್ ಅಂಡ್ ಟ್ರಾನ್ಸ್‌ಜೆಂಡರ್ ಸ್ಟಡೀಸ್ ಸೆಂಟರ್'ನಲ್ಲಿ ಸಂಭಾವನೆ ಪಡೆಯದ ಅತಿಥಿ ವಿದ್ವಾಂಸೆಯಾಗಿಯೂ ಅವರು ಕೆಲಸ

